# 21ರ ತಾರುಣ್ಯದಲ್ಲಿ ಅಜಯ್

ನಟ ಅಜಯ್ ರಾವ್ 21ರ ತಾರುಣ್ಯದಲ್ಲಿದ್ದಾರೆ! 21 ತುಂಬಿರುವುದು ಅಜಯ್ ಅವರ ವೃತ್ತಿಬದುಕಿಗೆ. ಅವರು ಮೊದಲಿಗೆ ನಾಯಕನಾಗಿ ನಟಿಸಿದ 'ಎಕ್ಸ್‌ಕ್ಯೂಸ್ ಮಿ' ಸಿನಿಮಾ ತೆರೆಕಂಡು 19 ವರ್ಷಗಳು ಸಂದವು. ಕ್ಯಾಮೆರಾ ಎದುರಿಗೆ ನಟಿಸಲು ತೊಡಗಿ 21 ವರ್ಷಗಳು. ಬಣ್ಣದ ಬದುಕಿನ ಈ ತಾರುಣ್ಯಕಾಲವನ್ನು ಅಜಯ್ ಸಮಚಿತ್ತದಿಂದಲೇ ಎದುರಿಸುತ್ತಿದ್ದಾರೆ. ಅಂದಹಾಗೆ, ಅವರು ನಾಯಕನಾಗಿ ನಟಿಸಿರುವ 'ಲವ್ ಯೂ ರಚ್ಚು' ಸಿನಿಮಾ ಡಿ. 31ಕ್ಕೆ ತೆರೆಕಾಣುತ್ತಿದೆ.

■ ಪದ್ಮನಾಭ ಭಟ್

◆ **ಎರಡು ದಶಕಗಳನ್ನು ದಾಟಿದ ಸಿನಿಮಾ ಪ್ರಯಾಣ ಹೇಗಿತ್ತು?**

ಹಿಂತಿರುಗಿ ನೋಡಿದರೆ ತುಂಬ ಖುಷಿಯಾಗುತ್ತದೆ. ಹೆಮ್ಮೆಯಾಗುತ್ತದೆ. ನಾನು ನಂಬರ್ ಒನ್ ಸೂಪರ್‌ಸ್ಟಾರ್ ಅಲ್ಲದಿರಬಹುದು. ನಾನು ಇಲ್ಲಿಗೆ ನಂ. 1 ಆಗಬೇಕು ಅಂತ ಬಂದವನಲ್ಲ. ಚಿತ್ರರಂಗವನ್ನು ಆಳಬೇಕು ಎಂಬ ಹಂಬಲ ನನ್ನಲ್ಲಿ ಇರಲಿಲ್ಲ. ಹೀರೊ ಆಗಬೇಕು ಎಂದು ಆಸೆ ಇತ್ತು. ಅದಕ್ಕಿಂತ ನಟನಾಗಿ ಗೆಲ್ಲಬೇಕು ಎಂದು ಅಂದುಕೊಂಡು ಬಂದಿರುವವನು ನಾನು.

ಹಾಗಂತ ನನಗೂ ಗೆಲುವು ಬೇಕು. ನನ್ನ ಸಿನಿಮಾ ಗೆಲ್ಲಬೇಕಿರುವುದು ಎರಡು ಕಾರಣಗಳಿಗೆ. ಮೊದಲನೆಯದಾಗಿ, ನನ್ನ ನಿರ್ಮಾಪಕ ಸೇಫ್ ಆಗಬೇಕು. ಎರಡನೆಯದಾಗಿ ನನ್ನ ಒಂದು ಸಿನಿಮಾ ಗೆದ್ದರೆ ಇನ್ನೊಂದಿಷ್ಟು ಸಿನಿಮಾಗಳಲ್ಲಿ ನಟಿಸಲು ಅವಕಾಶ ಸಿಗುತ್ತದೆ. ಇನ್ನೊಂದಿಷ್ಟು ಕಾಲ ಕ್ಯಾಮೆರಾ ಎದುರು ನಟಿಸುತ್ತ ಇರಬಹುದು. ಈ ಕಾರಣಗಳಿಗಾಗಿ ನನ್ನ ಸಿನಿಮಾ ಗೆಲ್ಲಬೇಕು ಎಂದು ಬಯಸುತ್ತೇನೆ. ಅದರಾಚೆಗೆ ಸೋಲು ಗೆಲುವುಗಳ ಬಗ್ಗೆ ನಾನು ತುಂಬ ತಲೆಕೆಡಿಸಿಕೊಂಡಿಲ್ಲ. ಎಲ್ಲವನ್ನೂ ಸಮಚಿತ್ತದಿಂದ ನೋಡಿದ್ದೇನೆ. ಇದುವರೆಗೆ ನಾನೇನು ಮಾಡಿದ್ದೇನೋ, ಅವೆಲ್ಲವೂ ನನ್ನ ಸ್ವಂತಿಕೆ, ಶ್ರಮ, ವೈಯಕ್ತಿಕ ಆಸಕ್ತಿಯಿಂದ ಮಾಡಿದ್ದು. ಇಷ್ಟು ವರ್ಷಗಳ ಪ್ರಯಾಣದಲ್ಲಿ ಎದುರಾದ ಗೆಲುವು, ಸೋಲು, ಅಪಮಾನ, ಅಭಿಮಾನ ಎಲ್ಲವನ್ನೂ ಸಮಚಿತ್ತದಿಂದ ನೋಡಿದ್ದೇನೆ. ಆ ಕ್ಷಣಗಳನ್ನು ಎಂಜಾಯ್ ಮಾಡಿದ್ದೇನೆ. ಆ ಎಲ್ಲ ಅನುಭವಗಳ ಬಗ್ಗೆಯೂ ನನಗೆ ಹೆಮ್ಮೆಯಿದೆ.

◆ **ವ್ಯಾಪಾರಿ ಲೆಕ್ಕಾಚಾರದ ಆಚೆಗೆ ಸಿನಿಮಾದ ಗೆಲುವಿನ ಬಗ್ಗೆ ನಿಮ್ಮ ವ್ಯಾಖ್ಯಾನ ಏನು?**

ನಾನು ಒಂದು ಸಿನಿಮಾದಲ್ಲಿ ನಟಿಸಲು ಒಪ್ಪಿದ್ದೀನಿ ಅಂದರೆ ಆ ಪಾತ್ರವನ್ನು ಆಯ್ಕೆ ಮಾಡಿಕೊಂಡಿದ್ದೇನೆ ಎಂದೇ ಅರ್ಥ ಅಲ್ಲವೇ? ಈ ಹತ್ತೊಂಬತ್ತು ವರ್ಷಗಳಲ್ಲಿ 26 ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿದ್ದೇನೆ. ಆದರೆ ಆ ಇಪ್ಪತ್ತಾರು ಪಾತ್ರಗಳನ್ನು ಒಪ್ಪಿಕೊಳ್ಳಲು ಕನಿಷ್ಠವೆಂದರೂ 260 ಕಥೆಗಳನ್ನು ಕೇಳಿದ್ದೇನೆ. ಅವುಗಳಲ್ಲಿ ನನಗೆ ಇಷ್ಟವಾದ 26 ಪಾತ್ರಗಳನ್ನು ಒಪ್ಪಿ ನಟಿಸಿದ್ದೇನೆ. ಹಾಗೆ ಒಂದು ಪಾತ್ರವನ್ನು ಒಪ್ಪಿಕೊಂಡಾಗಲೇ ಅದು ನನ್ನ ಪಾಲಿನ ಗೆಲುವು. ಆ ಗೆಲುವು ಕಾಣಿಸಿದ್ದರಿಂದಲೇ ನಾನು ಆ ಪಾತ್ರವನ್ನು ಒಪ್ಪಿಕೊಂಡಿದ್ದು. ಹಾಗಾಗಿ ನಂತರ ಫ್ಲಾಪ್ ಆದ್ರೂ ಅದು ನನ್ನದೇ ಸಿನಿಮಾ, ಗೆದ್ದರೂ ನನ್ನದೇ.

◆ **ನಿಮಗೆ ನಿರ್ದೇಶಕನಾಗುವ ಆಸೆ ಇಲ್ಲವೇ?**

ನಾನು ಇಲ್ಲಿಗೆ ಬಂದಿದ್ದು ನಟನಾಗಬೇಕು ಎಂಬ ಆಸೆಯಿಂದ. ಆದರೆ ನಿರ್ದೇಶಕ ಆಗಬೇಕು ಎಂಬ ಆಸೆ ಖಂಡಿತ ಇದೆ. ಯಾವುದೋ ಒಂದು ತಿನಿಸು ತಿನ್ನಬೇಕು ಎಂದು ನಿರ್ಧರಿಸಿಕೊಂಡು ನಾವು ಹೋಟೆಲಿಗೆ ಹೋಗುತ್ತೇವೆ. ಆದರೆ ಅಲ್ಲಿಗೆ ಹೋಗಿ ಮೆನು ನೋಡಿದ ಮೇಲೆ ಅದರಲ್ಲಿರುವ ಬೇರೆ ಬೇರೆ ತಿನಿಸಿನ ರುಚಿಯನ್ನೂ ನೋಡುತ್ತೇವಲ್ಲವೇ? ಚಿತ್ರರಂಗದಲ್ಲಿಯೂ ನನಗೆ ಹಾಗೆಯೇ ಆಗಿದೆ. ಇದೊಂದು ಸೃಜನಶೀಲ ಕ್ಷೇತ್ರ. ನನಗಿಲ್ಲಿ ಎಲ್ಲ ರೀತಿಯ ರುಚಿಗಳೂ ಸಿಕ್ಕಿವೆ. ಈಗಾಗಲೇ ಸಿನಿಮಾ ನಿರ್ಮಾಣ ಮಾಡಿದ್ದೇನೆ. ನಿರ್ದೇಶನ

